KATK900005432019

5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ತಿಪಟೂರು
ಎಸ್.ಸಿ.ಸಂಖ್ಯೆ: 10039/2019
ಪ್ರಮಾಣೀಕರಿಸಿದ ದಿನಾಂಕಃ 19.09.2025.

ಚಾ.ಸಾ−14

ಪ್ರಾ.ಸಾ−19

| | |
|---|---|
| ಹೆಸರು | ರಾಮು |
| ತಂದೆ ಹೆಸರು | ಕೃಷ್ಣಪ್ಪ |
| ವಯಸ್ಸು | 40 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಅಮೃತ್ತೂರು, ಕುಣಿಗಲ್ |

ಮುಖ್ಯವಿಚಾರಣೆ, ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಮೃತ ಸುರೇಶ್ ರವರ ಪರಿಚಯವಿರುತ್ತದೆ, ಅವರು ನಮ್ಮ ತಂಗಿಯ ಮಾವ ಇರುತ್ತಾರೆ. ಸದರಿ ಸುರೇಶ್ ರವರು ಆರು ವರ್ಷದ ಹಿಂದೆ ಮೃತಪಟ್ಟಿರುತ್ತಾರೆ, ಅವರ ಶವವನ್ನು ನಾನು ತುರುವೇಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಪೋಲಿಸರು ನನಗೆ ಆಸ್ಪತ್ರೆಗೆ ಬರುವಂತೆ ಯಾವುದೇ ನೋಟಿಸ್ ಅನ್ನು ನೀಡಿರುವುದಿಲ್ಲ. ಸದರಿ ಮೃತ ದೇಹವನ್ನು ನೋಡಿದಾಗ ಮೃತ ದೇಹದ ಮೇಲೆ ರಕ್ತ ಆಗಿರುವುದು ಕಂಡುಬಂದಿರುತ್ತದೆ, ಎಲ್ಲಿ ಗಾಯಗಳಾಗಿರುತ್ತದೆ ಹಾಗೂ ಎಲ್ಲಿ ರಕ್ತ ಬಂದಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಸುರೇಶ್ ರವರು ಹೇಗೆ

ಹಾಗೂ ಯಾವ ಕಾರಣಕ್ಕಾಗಿ ಮೃತಪಟ್ಟಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ನಾನು ಆಸ್ಪತ್ರೆಗೆ ನನ್ನ ತಾಯಿಯೊಂದಿಗೆ ಹೋಗಿದ್ದೆನು. ಸದರಿ ಆಸ್ಪತ್ರೆಯಲ್ಲಿ ನನ್ನ ತಂಗಿಯ ಗಂಡ ಹಾಜರಿದ್ದರು. ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಸದರಿ ಸಹಿಗಳನ್ನು ನಾನು ತುಮಕೂರು ಸರ್ಕಾರಿ ಆಸ್ಪತ್ರೆಯಲ್ಲಿ ಪಿ.ಎಂ ಮಾಡುವ ಕಾಲಕ್ಕೆ ಮಾಡಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿಯು ತನ್ನ ಸಹಿಗಳನ್ನು ನೋಡಿ ಒಪ್ಪಿಕೊಂಡಿದ್ದು, ಸದರಿ ದಾಖಲಾತಿಗಳನ್ನು ನಿ.ಪಿ-17 ಮತ್ತು 18 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಗಳನ್ನು ನಿ.ಪಿ-17(ಎ) ಮತ್ತು ನಿ.ಪಿ-18(ಎ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗಳಲ್ಲಿ ಏನು ಬರೆದಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಸುರೇಶ್ ರವರ ಮೃತ ದೇಹವನ್ನು ನೋಡಿದಾಗ ಅವರ ಮೈಮೇಲೆ ಜರ್ಕೀನ್, ಶರ್ಟ್ ಹಾಗೂ ಅಂಡರ್ ವಿಯರ್ ಇರುವುದು ಕಂಡು ಬಂದಿರುತ್ತದೆ. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಮುದ್ದೆಮಾಲು-1 ಜರ್ಕೀನ್, ಮುದ್ದೆಮಾಲು-2 ಶರ್ಟ್ ಅನ್ನು ನೋಡಿ ಗುರುತಿಸಿರುತ್ತಾರೆ. ನಾನು ಪಿ.ಯು.ಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ.

(**ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು**).

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>**

ದಿಃ 17.02.2019 ರಲ್ಲಿ ತುಮಕೂರು ಜಿಲ್ಲಾ ಆಸ್ಪತ್ರೆಗೆ ಶವ ಪಂಚನಾಮೆಗೆ ಹಾಜರಾಗುವಂತೆ ನನಗೆ ನಿ.ಪಿ-17 ರಂತೆ ನೋಟಿಸ್ ಅನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 17.02.2019 ರಂದು ತುಮಕೂರು ಸರ್ಕಾರಿ ಆಸ್ಪತ್ರೆಯ ಶವಗಾರದಲ್ಲಿ

ಪೋಲಿಸರು ನನ್ನ ಹಾಗೂ ಮಂಜುನಾಥ ಹಾಗೂ ಶ್ರೀನಿವಾಸ ರವರ ಸಮಕ್ಷಮ ಮೃತ ಸುರೇಶ್ ರವರ ಶವ ತನಿಖೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಮೃತ ಸುರೇಶ್ ರವರ ಮೃತ ದೇಹವನ್ನು ನೋಡಿದಾಗ, ಅವರಿಗೆ ತಲೆಯ ಎಡಭಾಗದಲ್ಲಿ, ಎಡಗಣ್ಣು ಹಾಗೂ ಮೃತನ ಮೈಮೇಲೆ ಗಾಯಗಳಾಗಿರುವುದನ್ನು ನಾನು ಗಮನಿಸಿರುತ್ತೇನೆ ಎಂದರೆ ಸರಿಯಲ್ಲ. ದಿಃ 16.02.2019 ರಂದು ಸುಮ ರವರ ಗಂಡ ಸುರೇಶ್ ಈತನಿಗೆ ಯಾರೋ ಬಲವಾದ ಆಯುಧದಿಂದ ತಲೆಗೆ ಹೊಡೆದು,ಅವರು ಮೃತ ಪಟ್ಟಿರುತ್ತಾರೆ ಎಂಬ ವಿಷಯವನ್ನು ಸುಶೀಲಮ್ಮನವರು ನಮಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು 2.15–4.45 ಗಂಟೆಯ ವರೆಗೂ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಸದರಿ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹಃ ಹಾಗೂ ಶವ ತನಿಖೆಯಲ್ಲಿ ಭಾಗವಹಿಸಿದ್ದರು ಸಹಃ ನಾನು ಸದರಿ ಪ್ರಕರಣದಲ್ಲಿ ನನಗೆ ಏನು ತಿಳಿದಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸದರಿ ನಿ.ಪಿ–18 ರಲ್ಲಿ ಬರೆದಿರುವ ಸಂಗತಿಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದರು ಸಹಃ ನಾನು ಆರೋಪಿತನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಂ.ಡಿ ವಕೀಲರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).**

**ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ಒಪ್ಪಿರುತ್ತಾರೆ.**

ಸಹಿ/-

**(ಹೇಮಂತ್ ಕುಮಾರ್ ಸಿ.ಆರ್)**
**5 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**
**ತಿಪಟೂರು**